ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01.

ಸಂಖ್ಯೆ:ಜಕೃನಿ(ಬೆವಿ)/LAQ-639/2024-25 ದಿನಾಂಕ:18.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಪಾಟೀಲ್ ಎಂ ವೈ (ಅಫ್ಜಲ್ ಪುರ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:639 ಗೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಪಾಟೀಲ್ ಎಂ.ವೈ (ಅಫ್ಜಲ್ ಪುರ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:639 ಗೆ ಮಾಹಿತಿ ಸಿದ್ದಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	639
ಪ್ರಶ್ನೆ ಕೇಳಿರುವ ವಿಧಾನ ಸಭೆಯ ಸದಸ್ಯರು	ಶ್ರೀ ಪಾಟೀಲ್ ಎಂ ವೈ (ಅಫ್ಜಲ್ ಪುರ್)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	24.07.2024

ವಿಷಯ: ಫಸಲ್ ಬಿಮಾ ಯೋಜನೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅಫಜಲಪೂರ ಮತಕ್ಷೇತ್ರದಲ್ಲಿ ಅನೇಕ ಕಡೆ ರೈತರು ವಿಮೆ ಕಂತನ್ನು ಕಟ್ಟಿ ಬೆಳೆಗಳು ನಾಶವಾದಾಗ ಫಸಲ್ ಬಿಮಾ ಯೋಜನೆಯ ಸಮೀಕ್ಷೆ ತಪ್ಪಾಗಿ ವರದಿ ಸಲ್ಲಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಅಫಜಲಪೂರ ಮತಕ್ಷೇತ್ರದಲ್ಲಿ ರೈತರು ವಿಮೆ ಕಂತನ್ನು ಕಟ್ಟಿ ಬೆಳೆಗಳು ನಾಶವಾದಾಗ ಫಸಲ್ ಬಿಮಾ ಯೋಜನೆಯ ಸಮೀಕ್ಷೆ ತಪ್ಪಾಗಿ ವರದಿ ಸಲ್ಲಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ (PMFBY) ಪರಿಷ್ಕೃತ ಮಾರ್ಗಸೂಚಿಯನ್ವಯ 2023-24ನೇ ಸಾಲಿನಲ್ಲಿ ಅಫಜಲಪೂರ ಮತಕ್ಷೇತ್ರದಲ್ಲಿ ಒಟ್ಟು **16,808** ಅರ್ಹ ರೈತ ಪ್ರಸ್ತಾವನೆಗಳಿಗೆ ಒಟ್ಟು **ರೂ.14.93** ಕೋಟಿ ಬೆಳೆ ವಿಮೆ ಪರಿಹಾರ ಮೊತ್ತ ಮಂಜೂರಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಆತನೂರ ಹೋಬಳಿಯಲ್ಲಿ ಬರುವ ಗುಡೂರು, ನೀಲೂರು, ಭೈರಮಡಗಿ, ಕೋಗನೂರು, ಮದರಾಬಿ, ಚೌಡಾಪುರ ಗ್ರಾಮಗಳ ಹಾಗೂ ಕಜರಗಿ ಹೋಬಳಿಯ ಇನ್ನೂ ಅನೇಕ ಗ್ರಾಮಗಳ ರೈತರಿಗೆ ಇನ್ನೂ ಪರಿಹಾರ ಸಿಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ:	ಸದರಿ ಯೋಜನೆಯಡಿ ಆತನೂರ ಹೋಬಳಿಯಲ್ಲಿ ಬರುವ ಗುಡೂರು, ನೀಲೂರು, ಭೈರಮಡಗಿ, ಕೋಗನೂರು, ಮದರಾಬಿ, ಚೌಡಾಪುರ ಗ್ರಾಮಗಳ ಹಾಗೂ ಕಜರಗಿ ಹೋಬಳಿಯ ಗ್ರಾಮಗಳಲ್ಲಿ 2023-24ನೇ ಸಾಲಿನಲ್ಲಿ ಒಟ್ಟು ಒಟ್ಟು **2,387** ಅರ್ಹ ರೈತ ಪ್ರಸ್ತಾವನೆಗಳಿಗೆ **ರೂ.2.46** ಕೋಟಿ ಬೆಳೆ ವಿಮೆ ಪರಿಹಾರ ಮೊತ್ತ ಮಂಜೂರಾಗಿರುತ್ತದೆ.

ಇ)	ಹಾಗಿದ್ದಲ್ಲಿ, ಸದರಿ ಪರಿಹಾರ ವಂಚಿತ ರೈತರಿಗೆ ಯಾವ ಕಾಲಮಿತಿಯೊಳಗೆ ಪರಿಹಾರ ನೀಡಲಾಗುವುದು? (ಪೂರ್ಣ ವಿವರ ನೀಡುವುದು)	PMFBY ಮಾರ್ಗಸೂಚಿಯನ್ವಯ ನೋಂದಣಿಯಾದ ಅರ್ಹ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತ ಸಂದಾಯವಾಗುತ್ತದೆ. ಅರ್ಹ ಇಲ್ಲದ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತ ಪಾವತಿಸಲು ಸದರಿ ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ.

ಕೃಷಿ ನಿರ್ದೇಶಕರು